ಕೆ. ಹರಿಪ್ರಸಾದ್, ಕುಂಜಿಬೆಟ್ಟು

ನಮ್ಮ ಎದುರು ಇರುವವರ ಮನಸ್ಸನ್ನು ಓದುವ ಶಕ್ತಿ ನಮಗಿರುತ್ತಿದ್ದರೆ ಏನಾಗುತ್ತಿತ್ತು?



ಒಬ್ಬರಿಗೊಬ್ಬರು ಎದುರಾಗದೆ ಹಿಂದುಮುಂದಾಗಿ ನಿಂತು ಮಾತನಾಡುವ ಪರಿಸ್ಥಿತಿ ಬರುತ್ತಿತ್ತು.

ಪಿ. ಶಂಕರಪ್ಪ, ಶಿವಮೊಗ್ಗ

ಇಂದು ಕುರಿಗಳ ಸಂಖ್ಯೆ ಹೆಚ್ಚಾಗಲು ರಾಜಕೀಯ ಭಾಷಣವೇ ಕಾರಣ ಅಲ್ಲವೆ?

ಅಲ್ಲ. ಜನ ಮರೆತ ಭಾಷಣವನ್ನು ದಿನಗಟ್ಟಲೆ ರಿಪೀಟಿಸಿ ಜೀವಂತವಾಗಿಸುವ ವಾಹಿನಿಗಳೇ ಕಾರಣ.

ಎಂ.ಸಿ. ಧನ್ಯತಾ, ಬೆಂಗಳೂರು

ಮನುಷ್ಯನಿಗೆ ವಾಸನೆಯನ್ನು ಗ್ರಹಿಸುವ ಶಕ್ತಿಯೇ ಇಲ್ಲದಿದ್ದರೆ ಏನಾಗುತ್ತಿತ್ತು?

ಸುಗಂಧ ದ್ರವ್ಯಗಳ ಉದ್ಯಮವೇ ಇರುತ್ತಿರಲಿಲ್ಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಸತ್ಯವನ್ನು ಸಾಯಿಸುವ ಶಕ್ತಿ ದೇವರಿಗಿಲ್ಲ. ಮತ್ತೆ ಯಾರಿಗೆ ಇದೆ?



ವಾಹಿನಿಗಳಿಗೆ, ವರದಿಗಾರರಿಗೆ, ವಕೀಲರಿಗೆ, ವರ್ತಕರಿಗೆ...

ಹರಿತಸ, ಬೆಂಗಳೂರು

ಅಲಂಕಾರಕ್ಕೆ ಕನ್ನಡಿ ಇಲ್ಲದಿದ್ದರೆ ಹೇಗಿರುತ್ತೆ?

ಮನೆಗೊಬ್ಬರಂತೆ ತಲೆ ಬೋಳಿಸಿ ತೈಲ ಲೇಪಿಸಿ ಪ್ರತಿಬಿಂಬಿಸುವಂತೆ ಮಾಡಲಾಗುತ್ತೆ.

ಜೀವಿ, ಗೊಂಡೇದಹಳ್ಳಿ

ಈಗಿನ ಹೆಣ್ಣಿನ ಬಳಿ ಪತಿಯು ಬಾಳುವುದೇ ದುಸ್ತರವಾಗಿರುವಾಗ ಸೊಸೆ ಬದುಕುವುದು ಸುಲಭವೆ?

ಸೊಸೆಯೂ ಈಗಿನ ಹೆಣ್ಣೇ ಆದ್ದರಿಂದ ಬದುಕಿಯಾಳು. ಎರಡು ಮದ್ದಾನೆಗಳ ನಡುವೆ ಮೊದ್ದ ಅಪ್ಪಚ್ಚಿ!

ಹೆಚ್.ಎಂ. ಚನ್ನವೀರಯ್ಯ

ಜ್ಞಾನ ಮತ್ತು ಆತ್ಮಜ್ಞಾನ; ಇವೆರಡರಲ್ಲಿ ಯಾವುದು ಮುಖ್ಯ?

ಅಸಲಿಗೆ ಮೈಮೇಲೆ, ಮಾತಿನ ಮೇಲೆ ಜ್ಞಾನ ಇರುವುದು ಮುಖ್ಯ.

ಎನ್. ವೈದೇಹಿ, ಮೈಸೂರು

ಮಾಟಗಾರರು, ದೆವ್ವ ಬಿಡಿಸುವವರು ಬೇವಿನ ಸೊಪ್ಪನ್ನೇ ಏತಕ್ಕೆ ಉಪಯೋಗಿಸುತ್ತಾರೆ?

ಏಟಿನ ಕಹಿಯೊಡನೆ ಬೇವಿನ ಕಹಿಯೂ ಸೇರುವುದು ಯಾವ ದೆವ್ವಕ್ಕೂ ರುಚಿಸದಂತೆ.

ವಿ. ಹೇಮಂತಕುಮಾರ್, ಬೆಂಗಳೂರು

ನಿದ್ರೆ ಮಾಡಲು ಸೂಕ್ತ ಸ್ಥಳ ಯಾವುದು?

ಹಾಡಿಗೆ ತಲೆದೂಗುತ್ತಿರುವರೆಂದು ನಂಬಿಸಬಹುದಾದ ಸಂಗೀತ ಕಛೇರಿ.

ಜಗದೀಶ ಬಿ. ಹೊಸೂರು, ಮೈಸೂರು

ಲಕ್ಷ್ಮೀಪೂಜೆಯನ್ನು ವೈಭವದಿಂದ ಆಚರಿಸುವ ಜನ ಸರಸ್ವತಿಯ ಪೂಜೆಯನ್ನೇಕೆ ಅದ್ದೂರಿಯಾಗಿ ಆಚರಿಸರು?

'ದುಂದುವೆಚ್ಚ ತಪ್ಪು' ಎಂದು ಸರಸ್ವತಿಯೇ ಅರಿವು ಮೂಡಿಸುವಳಂತೆ.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು

ಲೋಕಾಯುಕ್ತ ದಾಳಿಗೆ ಒಳಗಾದ ಅಧಿಕಾರಿಗಳು ಮುಂದೆ ಕಲಿಯಬೇಕಾಗಿರುವುದು ಏನನ್ನು?

ರೈಡ್ ಆಗುವುದನ್ನು ಮುಂಚೆಯೇ ತಿಳಿದುಕೊಳ್ಳುವ ಮಾರ್ಗವನ್ನು!

ಬಿ.ಆರ್. ಉಷಾ, ಬೆಂಗಳೂರು

ಹೆಣ್ಣು ಕಾಲಲ್ಲಿ ಅಕ್ಕಿಯ ಸೇರು ಒದೆಯುವ ಬದಲು ಕೈಯಲ್ಲೇ ನೂಕಬಹುದಲ್ಲಾ...?

ಅತ್ತೆಯ ಮನೆಗೆ ಪ್ರವೇಶಿಸುವಾಗಲೇ ಅಷ್ಟೆಲ್ಲ ತಗ್ಗಿಬಗ್ಗಿ ನಡೆಯಲು ಮನಸ್ಸಾಗದಂತೆ.

ಗಂಜಾಂ ನಾಗರಾಜ್, ಮೈಸೂರು

ಹೆಂಡತಿಯ ಕಾಲುಗಳನ್ನು ಹಿತವಾಗಿ ಒತ್ತುವ ಸೇವೆಯನ್ನು ಮಾಡಬಹುದೆ?

ಎಚ್ಚರ! ಹಿತ ಕಡಿಮೆಯಾದರೆ ನೀವು ಫುಟ್‌ಬಾಲ್ ಆಗುವ ಸಾಧ್ಯತೆ ಇದೆ.

## ಬಹುಮಾನಿತ ಪ್ರಶ್ನೆ

ವಿಜಯ ಜಿ. ರಾವ್

ಜಾತಿ ದರ್ಬಾರ್‌ಗಿಂತ ಮಹಾರಾಜರ ದರ್ಬಾರೇ ಚೆನ್ನಾಗಿತ್ತೇನೋ?

ನಿಜವೇ. ಅವರು ಸಮಾಜದ ಒಡೆಯರು. ಇವರು ಸಮಾಜವನ್ನು ಒಡೆವರು.

ಬಿ. ಚಂದ್ರೇಗೌಡ, ಬೆಂಗಳೂರು

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದು ಕೋಟಿ ರೂಪಾಯಿ ಎಂದ ಕವಿಯ ಆಂತರ್ಯವೇನಿರಬಹುದು?

ಹೊರಗೆಹೋದರೆಕೋಟಿರೂಪಾಯಿಯವರೆಗೆ ಖರ್ಚು ಮಾಡಬಹುದೆಂದು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಅರಿತಂಗೆ ಅರವತ್ತು. ಮರೆತಂಗೆ ಮೂವತ್ತು. ಇದರ ಅರ್ಥ ತಿಳಿಸಿ ಸಾರ್?

ಇದು ಕುಡುಕರ ಲೆಕ್ಕ; ಸರಿಗೆ ತಿಳಿದಂತೆ 60, ತಿಳಿಯದಂತೆ 30 ಹಾಕುವ ಜಾಣತನ.

ಅಂಚೆ ಸುಬ್ರಹ್ಮಣ್ಯ, ಕೊಪ್ಪ

ಶ್ವಾನಗಳು ಕಾರಿನ ಅಡಿಯಲ್ಲೇ ಬಂದು ಮಲಗಲು ಕಾರಣವೇನು?



ತಲೆಯ ಮೇಲೊಂದು ಸೋರದ ಸೂರು ಇರಲೆಂದು.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ನಿಮ್ಮನ್ನು ಮುಖ್ಯಮಂತ್ರಿ ಮಾಡಿದರೆ ನೀವು ಮಾಡುವ ಮೊದಲ ಕೆಲಸ?

'ಥೆ! ಎಂತಹ ದುಸ್ವಪ್ನ' ಎಂದುಕೊಳ್ಳುತ್ತಾ ಮತ್ತೆ ನಿದ್ರೆಗೆ ಜಾರುತ್ತೇನೆ.

ರಾಜಶೇಖರ ಹಾದಿಮನಿ, ಧಾರವಾಡ

ಬೆಲೆಗಳು ಗಗನಕ್ಕೆ ಹಾರಿದರೆ ಮನುಷ್ಯ ಭೂಮಿಯೊಳಗೆ ಕುಸಿಯುವನಲ್ಲ?

ಬೆಲೆ ತ್ರಿವಿಕ್ರಮ; ಮನುಷ್ಯ ಅದಕ್ಕೆ ಬಲಿ. ತ್ರಿವಿಕ್ರಮನು ಬಲಿಯನ್ನು ಪಾತಾಳಕ್ಕೆ ತಳ್ಳುವುದು ಸಮ್ಮತ ಕಥೆ.

■ ರಾಮ್